ನಿಮ್ಮೊಡನೆ

# ಕನ್ನಡ ಮಾಧ್ಯಮ ಶಾಲೆಗಳ ಬಲವರ್ಧನೆಗೆ ಮೂಲಸೌಕರ್ಯ, ಗುಣಮಟ್ಟ ಬೀಜಮಂತ್ರವಾಗಲಿ

ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿವೆಯೆಂದರೆ, ಅದಕ್ಕೆ ನಮ್ಮ ಶಿಕ್ಷಣ ನೀತಿಯ ವೈಫಲ್ಯ ಹಾಗೂ ಅಧಿಕಾರಸ್ಥರ ನಿರ್ಲಕ್ಷ್ಯವೇ ಕಾರಣ. ಅದಕ್ಕೆ ಪೋಷಕರನ್ನು ಮಾತ್ರ ದೂಷಿಸುವುದರಿಂದ ಪ್ರಯೋಜನವಿಲ್ಲ. ಸರ್ಕಾರಿ ಶಾಲೆಗಳನ್ನು ಬಲಪಡಿಸುವುದೊಂದೇ ಅದಕ್ಕಿರುವ ಪರಿಹಾರ.


ಈಶ್ವರ್

ಈ ನೆಲದ ಭಾಷೆಯನ್ನು ಉಳಿಸುವ ಮತ್ತು ಬೆಳೆಸುವ ಕೆಲಸದಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಮಹತ್ವಪೂರ್ಣವಾದುದು. ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಿ, ಶಿಕ್ಷಣದ ಗುಣಮಟ್ಟ ವೃದ್ಧಿಸುವ ಮೂಲಕ ಹೆಚ್ಚು ಮಕ್ಕಳನ್ನು ಸೆಳೆಯುವ ಕೆಲಸ ಆದ್ಯತೆಯ ಮೇಲೆ ಆಗಬೇಕು. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಶಾಲೆಗಳ ಸ್ಥಿತಿ ಉತ್ತಮಗೊಳ್ಳುವ ಬದಲು ದಿನೇ ದಿನೇ ಸೊರಗುತ್ತಲೇ ಇರುವುದು ಭಾಷೆಯ ಉಳಿವಿನ ನೆಲೆಯಲ್ಲಿ ಆತಂಕಕಾರಿ ಬೆಳವಣಿಗೆ.

ರಾಜ್ಯದಲ್ಲಿ ಒಟ್ಟು 47,116 ಸರ್ಕಾರಿ ಶಾಲೆಗಳಿವೆ. ಈ ಶಾಲೆಗಳ 75,675 ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ ಎಂದು ಗುರುತಿಸಲಾಗಿದೆ. ಈ ಕೆಲಸ ಹೋದ ವರ್ಷವೇ ಆಗಿದೆ. ಆದರೆ ಶಿಥಿಲಾವಸ್ಥೆಯಲ್ಲಿರುವ ಈ ಕೊಠಡಿಗಳ ಪೈಕಿ ಬರೀ 6,601 ಕೊಠಡಿಗಳು ಮಾತ್ರ ದುರಸ್ತಿ ಕಂಡಿವೆ. ಉಳಿದವುಗಳ ಪೈಕಿ 28 ಸಾವಿರ ಕೊಠಡಿಗಳ ಸ್ಥಿತಿ ಶೋಚನೀಯವಾಗಿದೆ ಎಂದು ಶಿಕ್ಷಣ ಇಲಾಖೆಯೇ ಗುರುತಿಸಿದೆ ಎಂದು ವರದಿಯಾಗಿದೆ. ಎಂತಹ ದುಃಸ್ಥಿತಿ!

ಮುಂಗಾರು ರಾಜ್ಯ ಪ್ರವೇಶಿಸುವ ಮೊದಲೇ ಮಳೆ ತನ್ನ ಪ್ರತಾಪ ತೋರಿದೆ. ದುರ್ಬಲ ಕಟ್ಟಡಗಳ ಪಾಲಿಗೆ ಅಬ್ಬರದ ಮಳೆ ಶಾಪವಾಗಿ ಪರಿಣಮಿಸಲಿದೆ. ಮಳೆ ಜೋರಾಗಿ ಸುರಿದರೆ ಸೋರುವುದು, ಕೊಠಡಿಗಳಿಗೆ ನೀರು ನುಗ್ಗುವುದು, ಗೋಡೆ ಮತ್ತು ಚಾವಣಿ ಕುಸಿಯುವ ಸಂಭವ ಇದ್ದೇ ಇರುತ್ತದೆ. ಇಂತಹ ಶಾಲೆಗಳಿಗೆ ಮಕ್ಕಳನ್ನು ಪೋಷಕರು ಯಾವ ಧೈರ್ಯದ ಮೇಲೆ ಕಳಿಸುತ್ತಾರೆ? ಇಂತಹ ವಾತಾವರಣದಲ್ಲಿ ಶಿಕ್ಷಕರು ನಿರಾತಂಕವಾಗಿ ಪಾಠ ಮಾಡಲು ಮತ್ತು ಮಕ್ಕಳು ಸಂತಸದಿಂದ ಕಲಿಯಲು ಸಾಧ್ಯವೇ?

ಎರಡು–ಮೂರು ದಶಕಗಳ ಹಿಂದೆ ಕರ್ನಾಟಕದಲ್ಲಿ ಶೇ. 80ಕ್ಕೂ ಹೆಚ್ಚು ಮಕ್ಕಳು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದುತ್ತಿದ್ದರು. ಆ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತ ಈಗ ಶೇ. 50ರ ಆಸುಪಾಸಿಗೆ ಬಂದಿದೆ. ಇಂಗ್ಲಿಷ್ ಮಾಧ್ಯಮ ಎಂಬುದು ಸಮೂಹಸನ್ನಿಯಂತೆ ಆವರಿಸಿದೆ. ಹೋಬಳಿ ಕೇಂದ್ರ ಮತ್ತು ಗ್ರಾಮ ಮಟ್ಟದಲ್ಲೂ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳು ಕಣ್ತೆರೆದು ಸರ್ಕಾರಿ ಶಾಲೆಗಳ ಅಸ್ತಿತ್ವಕ್ಕೆ ಸವಾಲಾಗಿ ಪರಿಣಮಿಸಿವೆ. ಆದರೂ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ದಿಸೆಯಲ್ಲಿ ನಮ್ಮ ಸರ್ಕಾರ ಇಚ್ಛಾಶಕ್ತಿ ತೋರುತ್ತಿಲ್ಲ ಎಂಬುದು ಅತ್ಯಂತ ಬೇಸರದ ಸಂಗತಿ.

‘ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಹೆಣ್ಣುಮಕ್ಕಳಿಗೆ ಶೌಚಾಲಯದಂಥ ವ್ಯವಸ್ಥೆ ಕಲ್ಪಿಸದಿರುವುದು ನಾಚಿಕೆಗೇಡಿನ ವಿಚಾರ’ ಎಂದು ಈಚೆಗೆ ರಾಜ್ಯ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಕೆಲವು ಖಾಸಗಿ ಶಾಲೆಗಳು ಮಕ್ಕಳಿಗೆ ಮಿನರಲ್ ವಾಟರ್ ಮತ್ತು ಸ್ಮಾರ್ಟ್ ಬೋರ್ಡ್ಸ್ ವ್ಯವಸ್ಥೆ ಮಾಡಿವೆ. ಆದರೆ ಸರ್ಕಾರಿ ಶಾಲೆಗಳ ಮಕ್ಕಳಿಗೆ ಕುಡಿಯುವ ನೀರಿನ ಅತ್ಯಂತ ಮೂಲಭೂತ ಸೌಕರ್ಯವೇ ಗಗನಕುಸುಮ ಆಗಿರುವುದನ್ನು ಕೋರ್ಟ್ ಗುರುತಿಸಿ, ಛೀಮಾರಿ ಹಾಕಿರುವುದು ನಮ್ಮ ಅಧಿಕಾರಸ್ಥರ ಕಣ್ಣು ತೆರೆಸುವುದೇ?

ಕನ್ನಡ ಮಾಧ್ಯಮ ಶಾಲೆಗಳ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ನಮ್ಮ ನಾಡು–ನುಡಿಯ ಹಿತರಕ್ಷಣೆಯೂ ಸಾಧ್ಯ ಎನ್ನುವುದು ಸರ್ಕಾರಕ್ಕೆ ಇನ್ನೂ ಅರ್ಥ ಆಗದಿರುವುದು ದುರದೃಷ್ಟಕರ. ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿವೆಯೆಂದರೆ, ಅದಕ್ಕೆ ನಮ್ಮ ಶಿಕ್ಷಣ ನೀತಿಯ ವೈಫಲ್ಯ ಹಾಗೂ ಅಧಿಕಾರಸ್ಥರ ಕಾಳಜಿ ಕೊರತೆಯೇ ಕಾರಣ. ಅದಕ್ಕೆ ಪೋಷಕರನ್ನು ಮಾತ್ರ ದೂಷಿಸುವುದರಿಂದ ಪ್ರಯೋಜನವಿಲ್ಲ. ಸರ್ಕಾರಿ ಶಾಲೆಗಳನ್ನು ಬಲಪಡಿಸುವುದೊಂದೇ ಅದಕ್ಕಿರುವ ಪರಿಹಾರ. ಈ ದಿಸೆಯಲ್ಲಿ ಸರ್ಕಾರ ಬದ್ಧತೆ ತೋರಬೇಕು. ಈ ಮಹತ್ತರ ಕೆಲಸದಲ್ಲಿ ಸ್ಥಳೀಯರನ್ನೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

ಸರ್ಕಾರಿ ಶಾಲೆಗಳ ದುಃಸ್ಥಿತಿಯ ಪರಿಣಾಮ ಹೆಚ್ಚಿಗೆ ತಟ್ಟುವುದು ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳನ್ನು. ವಿಶೇಷವಾಗಿ ಬಡ ಸಮುದಾಯಗಳ ಮಕ್ಕಳ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸರ್ಕಾರಿ ಶಾಲೆಗಳು ಮಕ್ಕಳಿಗೆ ಕಲಿಕೆಯ ಕೇಂದ್ರಗಳಾಗಿರುವುದರ ಜೊತೆಗೆ, ಸಾಮಾಜಿಕ ನ್ಯಾಯ ದೊರಕಿಸಿಕೊಡುವ ವೇದಿಕೆಗಳೂ ಆಗಿವೆ ಎಂಬುದನ್ನು ನಮ್ಮ ಅಧಿಕಾರಸ್ಥರು ಅರಿಯಬೇಕು. ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳು ಉತ್ತಮಗೊಂಡು, ಗುಣಮಟ್ಟದ ಶಿಕ್ಷಣ ದೊರೆತರೆ ಮಕ್ಕಳು ಸರ್ಕಾರಿ ಶಾಲೆಗಳತ್ತ ಸಹಜವಾಗಿಯೇ ಆಕರ್ಷಿತರಾಗುತ್ತಾರೆ. ವಾಸಿಸುವ ಊರಿನಲ್ಲಿಯೇ ಚೆನ್ನಾಗಿ ಕಲಿಸುವಂಥ ಸರ್ಕಾರಿ ಶಾಲೆಯೊಂದು ದೊರೆತರೆ ಪೋಷಕರು ಕೂಡ ಬೇಡವೆನ್ನಲಾರರು. ಮೂಲ ಸೌಕರ್ಯ ಮತ್ತು ಗುಣಮಟ್ಟ ವೃದ್ಧಿಯು ಇನ್ನಾದರೂ ಶಿಕ್ಷಣ ಇಲಾಖೆಯ ಮೂಲಮಂತ್ರವಾಗಲಿ. ಅದಕ್ಕೊಂದು ನೀಲನಕ್ಷೆ ರೂಪಿಸಿ, ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಬದ್ಧತೆಯನ್ನು ಸರ್ಕಾರ ತೋರಲಿ.

■ ಎನ್. ಉದಯಕುಮಾರ್